**Sri H. M. CHANNABASAPPA.**—Shall I take it that a certain amount of responsibility devolves on Government in the matter of keeping the roads in good condition?

**The Hon'ble Sri T. MARIAPPA.**—The Government are only agencies of District Boards for the purpose of repairing the roads. If money is available, it will be spent and the surface of the road improved.

**Sri H. M. CHANNABASAPPA.**—Have the Government assured themselves that the district funds are adequate enough for the proper upkeep of the entire length of the roads?

**The Hon'ble Sri T. MARIAPPA.**—That is to be worked out by the District Boards. Some have funds. Others are pleading for grants from the Government.

**Sri H. M. CHANNABASAPPA.**—Having known that this road is terribly bad, why did not the Government make adequate provision?

**The Hon'ble Sri T. MARIAPPA.**—It is not the responsibility of the Government; it is the responsibility of the District Board. But if the District Board could make a request.....

**Sri H. M. CHANNABASAPPA.**—The Hon'ble Minister contradicts himself. Just now his reply was that the Government have responsibility. Now he says that the Government have no responsibility.

**The Hon'ble Sri T. MARIAPPA.**—As the agency of District Board, the Government have responsibiity to repair the roads to the extent to which funds are made available.

**Sri H. M. CHANNABASAPPA.**—Are the annual repair grants varying from year to year?

**The Hon'ble Sri T. MARIAPPA.**—It is spent at Rs 200 per mile and the amount spent on the road is the amount that is given here.

**Sri H. M. CHANNABASAPPA.**—Shall I take it that some amount is not at all worked out even though provision is made? Shall I take it that the Public Works Department did not spend even the amount allotted?

**The Hon'ble Sri T. MARIAPPA.**—He can see the amounts spent. 1946-47 Rs. 2,477 under 'A.R.' and Rs. 3,498 under 'S.R.'. Part of it has not been worked out, but special repair has been made.

**Sri H. M. CHANNABASAPPA.**—My point is, it is clear from this that even the A. R. grant that is allotted has not been worked out.

**The Hon'ble Sri T. MARIAPPA.**—He can see that from 1950-51 we have spent more.

---

**Mr. SPEAKER.**—Janab Mohamed Imam. Question No. 167. The Hon'ble Member is not present. The question will therefore be treated as an unstarred question.

---

## Appointment of Supervisors in the Public Works Department.

*Q.—187. **Sri S. RANGARAMIAH** (Mysore District—General).—

Will the Government be pleased to state:—

(*a*) the number of Supervisors appointed in the P.W.D., and when this class of appointment was sanctioned by the Government;

(*b*) their qualifications and the kind of work entrusted to them;

(*c*) whether such system of appointment is in vogue in the neighbouring States;

(*d*) whether the Assistant Engineers were not doing the same work formerly;

(*e*) whether there are any complaints from the Sub-Overseers and Assistant Engineers that the appointments of the Supervisors have caused bitterness and dissatisfaction among the Sub-Overseers?

*A.—**The Hon'ble Sri T. MARIAPPA** (Home Minister).—

(*a*) Two hundred and forty two Surveyors as per G.O. No. 2793-2892—C. B. 9 3-49-1, dated 27th September 1949, sanctioning the re-organisation of the P. W. D. The designation of the Surveyors in the Department was

ordered to be changed to that of "Supervisors" in G.O. No. P.W. 6074-77—Est. 37-49-9, dated 4th January 1950.

(*b*) B. E. Degree examinations. In regular Divisions, the Supervisor is in charge of Taluk as Section Officer to supervise the work of one or more Sub-Overseers and check-measure works in his section. They are also in charge of Special projects, designs and investigations. In Special works like Tunga, Lakkavalli and Nugu, they are in direct charge of important works.

(*c*) This office has no information.

(*d*) Since the number of works have now increased, the Assistant Engineer will not be able to supervise and check-measure effectively all the works of his Sub-Division. To assist him in the above and in other technical matters Supervisors at the rate of one each Taluk have been posted.

(*e*) No such complaints have been received.

ಶ್ರೀ ಎಸ್. ರಂಗರಾಮಯ್ಯನವರು.—ತಾವು (ಎ) ಪ್ರಶ್ನೆಗೆ ಉತ್ತರವಾಗಿ ತಿಳಿಸಿರುವುದರಲ್ಲಿ ಬಿ. ಇ. ಪಾಸ್ ಮಾಡಿಕೊಂಡು ಬಂದಿರುವಂಥ 242 ಜನರನ್ನು ಸೂಪರ್ ವೈಸರುಗಳಾಗಿ ನೇಮಕ ಮಾಡಿಕೊಳ್ಳಲಾಗಿದೆಯೆಂದು ಹೇಳಿದೆ. ಇವರಿಗೆ ಎಷ್ಟು ವರ್ಷಗಳ ಅನುಭವವಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೊದಲು ತೆಗೆದುಕೊಂಡಂಥವರಿಗೆ ಹೆಚ್ಚಿನ ಅನುಭವವಿದೆ. ಈಚೆಗೆ ತೆಗೆದುಕೊಂಡವರಿಗೆ ಸ್ವಲ್ಪ ಕಮ್ಮಿ ಅನುಭವವಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಮೊದಲು ತೆಗೆದುಕೊಂಡವರು ಯಾವಾಗ ಪಾಸ್ ಮಾಡಿದವರು ಮತ್ತು ಈಚೆಗೆ ತೆಗೆದುಕೊಂಡವರು ಯಾವಾಗ ಪಾಸ್ ಮಾಡಿದವರು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪರೀಕ್ಷೆ ಫಲ ತಾಂತಗಳು ಹೊರಬಿದ್ದ ಮಾರನೆಯ ದಿವಸವೇ ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ. ಯಾವ ಯಾವ ವರ್ಷ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೋ ಆ ತಕ್ಷಣವೇ ಅವರನ್ನೆಲ್ಲಾ ಕೆಲಸಕ್ಕೆ ನೇಮಿಸಿಕೊಳ್ಳಲಾಗಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಇವರ ಕೈಕೆಳಗಿನವರು ಮಾಡಿರತಕ್ಕ ಕೆಲಸಗಳು ಸರಿಯಾಗಿವೆಯೆಂಬುದನ್ನು ತಿಳಿದುಕೊಳ್ಳಲು ಇವರಿಗೆ ಶಕ್ತಿಯಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದರ ಇವರಿಗೆ ರೆಗ್ಯುಲರ್ ಟ್ರೈನಿಂಗ್ ಆಗಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಇವರನ್ನು ಈಗ ಅಸಿಸ್ಟೆಂಟ್ ಇಂಜನಿಯರುಗಳ ಕೈ ಕೆಳಗೆ ಹಾಕಿ ಇವರಿಗೆ ಸರಿಯಾದ ತರಬೇತನ್ನು ಕೊಡಲಾಗುತ್ತಿದೆ. ಮೊದಲು ಇವರನ್ನೆಲ್ಲಾ ಸರ್ವೇಯರ್ಸ್ ಎಂದು ಕೆಲಸಕ್ಕೆ ತೆಗೆದುಕೊಳ್ಳಲಾಯಿತು. ಈ ಟ್ರೈನಿಂಗ್ ಕೊಟ್ಟನಂತರ ಇವರನ್ನು ಸೂಪರ್ ವೈಸರ್ಸ್ ಆಗಿ ನೇಮಕ ಮಾಡಲಾಗಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಈಗ ನಡೆಯುತ್ತಿರುವ ಪ್ರಕಾರ ಪ್ರತಿಯೊಂದು ಎಸ್ಟಿಮೇಟ್ ಮತ್ತು ಮೆಷರ್‌ಮೆಂಟ್‌ಗಳನ್ನು ಅಸಿಸ್ಟೆಂಟ್ ಇಂಜನಿಯರುಗಳು ಚೆಕ್ ಮಾಡಬೇಕೆಂದಿದೆಯಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅನುಮಾನ ಕಂಡುಬರುವ ಕಡೆಗಳಲ್ಲೆಲ್ಲಾ ಹಾಗೆ ಚೆಕ್ ಮಾಡುತ್ತಾರೆ. ಉಳಿದ ಕಡೆ ಈ ಸೂಪರ್‌ವೈಸರ್ಸ್‌ಗಳೇ ಚೆಕ್ ಮಾಡುತ್ತಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಹೀಗೆ ಈ ಸೂಪರ್‌ವೈಸರ್ಸ್‌ಗಳು ಚೆಕ್ ಮಾಡಿದ್ದನ್ನು ಆಡಿಟರ್ಸ್ ಒಪ್ಪಿಕೊಂಡಿದ್ದಾರೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವು ಸಂದರ್ಭಗಳಲ್ಲಿ ಆಡಿಟ್ ಆದನಂತರ ಹಣ ಕೊಡಲಾಗುತ್ತೆ. ಇನ್ನು ಕೆಲವು ಸಂದರ್ಭಗಳಲ್ಲಿ ಹಣ ಪಾವತಿಯಾದ ಮೇಲೆ ಆಡಿಟ್ ಆಗುತ್ತೆ. ಇಲ್ಲಿಯತನಕ ಯಾವ ತಕರಾರೂ ಬಂದಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಮದ್ರಾಸ್ ಮತ್ತು ಬೊಂಬಾಯಿ ಪ್ರಾಂತ್ಯಗಳಲ್ಲಿ ಈ ತರೆನಾದ ಅಧಿಕಾರಿಗಳನ್ನು ನೇಮಕ ಮಾಡಿಕೊಂಡಿದ್ದಾರೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೆ 'ಇಲ್ಲ' ಎಂಬ ಉತ್ತರವನ್ನಾಗಲೇ ಕೊಡಲಾಗಿದೆ. ಆದಾಗ್ಯೂ ಇದೇ ತರಹ ಹುದ್ದೆಗಳು ಅಲ್ಲಿಯೂ ಇವೆ.

ಶ್ರೀ ಎಸ್. ರಂಗರಾಮಯ್ಯನವರು.—ಅಸಿಸ್ಟೆಂಟ್ ಇಂಜನಿಯರುಗಳನ್ನು ಈ ಸೂಪರ್‌ವೈಸರ್ಸ್ ಮೇಲೆ ಹಾಕಿದ್ದೀರೋ ಆಥವಾ ಓವರ್‌ಸಿಯರ್ಸ್, ಸರ್ವೇಯರ್ಸ್ ಮೇಲೆ ಹಾಕಿದ್ದೀರೋ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಬ್-ಓವರ್‌ಸೀಯರುಗಳ ಮೇಲೆ ಓವರ್ಸಿಯರುಗಳಿದ್ದಾರೆ. ಈ ಓವರ್ಸೀಯರ್ ಮತ್ತು ಸೂಪರ್‌ವೈಸರುಗಳ ಮೇಲೆ ಅಸಿಸ್ಟೆಂಟ್ ಇಂಜನಿಯರುಗಳಿರುತ್ತಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಈ ಸೂಪರ್‌ವೈಸರುಗಳಿರುವಾಗ ಓವರ್‌ಸೀಯರುಗಳಿಗೇನು ಕೆಲಸ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲಾಖೆಯಲ್ಲಿರುವ ಸಬ್-ಓವರ್ಸೀಯರುಗಳು ಸರ್ವಿಸ್ ಆದಂತೆಲ್ಲಾ ಓವರ್ಸೀಯರಾಗಲು ಅವಕಾಶವಿದೆ. ಇವರೆಲ್ಲ ಇಂಜನಿಯರಿಂಗ್ ಸ್ಕೂಲಿನಲ್ಲಿ ಉತ್ತೀರ್ಣರಾಗಿ ಬಂದವರು. ಸೂಪರ್‌ವೈಸರ್ಸ್ ಕಾರ್ಯಕ್ಕಿನಲ್ಲಿ ಓದಿ ಪಾಸ್ ಮಾಡಿರುವವರು.

ಶ್ರೀ ಎಸ್. ರಂಗರಾಮಯ್ಯನವರು.—ಈ ಸೂಪರ್‌ವೈಸರ್ಸ್‌ಗಳಿಗಿಂತಲೂ ಹೆಚ್ಚಿನ ಅನುಭವವಿರುವ ಸಬ್-ಓವರ್ಸೀಯರು ಇಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದ್ದಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಹೀಗೆ ಹೊಸದಾಗಿ ಕಾರ್ಯಕ್ಷೇತ್ರಕ್ಕೆ ಬಂದಾಕ್ಷಣಕ್ಕೆ ಅವರಿಗೆ ಈ ಹೆಚ್ಚಿನ ದರ್ಜೆ ಕೆಲಸವನ್ನು ಕೊಡುವುದರಿಂದ ಇಲಾಖೆಯಲ್ಲಿರತಕ್ಕ ಅನುಭವ ಪಡೆದಿರುವ ನೌಕರರಿಗೆ ಅಸಮಾಧಾನ ಉಂಟಾಗುವುದಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ಸೂಪರ್‌ವೈಸರುಗಳು ಈ ಸ್ಥಾನಕ್ಕೆ ಬಂದು ನಂತರ ಇವರು ಅಸಿಸ್ಟೆಂಟ್ ಇಂಜನಿಯರಾಗುವ ವೇಳೆಗೆ ಇವರಿಗೆ ಪ್ರತಿಯೊಂದು ಬಾಬಿನಲ್ಲೂ ಅನುಭವ ಉಂಟುಮಾಡಲು ಎಲ್ಲಾ ದರ್ಜೆಯ ಕೆಲಸದಲ್ಲೂ ಟ್ರೈನಿಂಗ್ ಆಗಬೇಕು.

ಶ್ರೀ ಎಸ್. ರಂಗರಾಮಯ್ಯನವರು.—ತಾವು ಹೀಗೆ ಮಾಡಿರುವುದು ತುಂಬಾ ಅನ್ಯಾಯವಾಗಿದೆಯೆಂದು ತಮಗೆ ಯಾರಿಂದಲೂ ಫಿರ್ಯಾದುಗಳು ಬಂದಿಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಈ ಸೂಪರ್ ವೈಸರ್ಸ್‌ಗಳನ್ನು ನೇಮಿಸಿಕೊಂಡಿದ್ದರಿಂದ ಇರ್ಲಾಖೆಗೆ ಖರ್ಚು ಮೊದಲಗಿಂತ ಹೆಚ್ಚಾಗಿದೆಯೋ ಅಥವಾ ಕಮ್ಮಿಯಾಗಿದೆಯೋ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಖರ್ಚು ಕಮ್ಮಿಯಾಗಿದೆ.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಈ ಬಿ. ಇ. ಸಾಸ್ತಾದವರುಗಳೆಲ್ಲಾ ಇತ್ತೀಚೆಗೆ ಬಂದಿರುವವರಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ವಿಚಾರ ತಮಗೇ ಗೊತ್ತಿದೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಈ ಕೆಳ ನೌಕರರು ಮಾಡಿದ ಕೆಲಸ ಕಾರ್ಯಗಳ ಅಳತೆ ಇತ್ಯಾದಿಗಳನ್ನು ಯಾರು ಚೆಕ್ ಮಾಡತಕ್ಕವರು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಅಸಿಸ್ಟೆಂಟ್ ಇಂಜಿನಿಯರುಗಳು ಮತ್ತು ಈ ಸೂಪರ್‌ವೈಸರ್ಸ್‌ಗಳು.

ಶ್ರೀ ಎಚ್. ಸಿದ್ದವೀರಪ್ಪನವರು.—ಈಗ ಈ ಸೂಪರ್ ವೈಸರ್ಸ್‌ಗಳು ಮಾಡುವ ಕೆಲಸ ಸಮರ್ಪಕವಾಗಿದೆಯೆಂದು ತಿಳಿದುಬಂದಿದೆಯೆ ?

ಮಾನ್ಯ ಶ್ರೀ ಟಿ ಮರಿಯಪ್ಪನವರು.—ಇಲ್ಲಿಯತನಕ ದೂರುಗಳ್ಯಾವುವೂ ಬಂದಿಲ್ಲ.

**Mr. SPEAKER.**—Question No. 154. Sri V. S. Narayana Rao. The Hon'ble Member is not present. The question will be treated as an unstarred question.

**Sri M. MADIAH.**—I request that the question may be kindly allowed to be put by some other member.

**Mr. SPEAKER.**—The Hon'ble Member did not ask me earlier. Next question No. 2.

---

## Growing of Kar Ragi or Summer crop under Grow More Food Scheme.

*Q.—2. **Sri M. V. KRISHNAPPA** (Kolar District—General).—

Will the Government be pleased to state:—

(*a*) whether there is any programme to grow *kar* ragi or summer crop under Grow More Food Scheme in the State;

(*b*) the nature of aid given to the farmers to grow *kar* ragi or summer crops?

*A.—**The Hon'ble Sri T. MARIAPPA** (Home Minister).—

(*a*) Yes.

A programme to bring 10,228 acres under *kar* ragi and 38,807 acres under summer paddy is drawn up having regard to the storage of water in several tanks.

(*b*) (i) Manures and seeds will be supplied to raiyats at cost price, the transportation and other incidental charges being borne by Government.

(ii) Manures will also be supplied on credit basis up to a maximum limit of Rs. 100 in deserving cases.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಯಾವ್ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಎಕರೆ ಕಾರುರಾಗಿ ಬೆಳೆಯಬೇಕೆಂಬ ಬಗ್ಗೆ ಒಂದು ಯೋಜನೆಯಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಯೋಜನೆಯಿತ್ತು, ಆದರೆ ಈ ವರ್ಷ ಅದರಂತೆ ಬೆಳೆಯಲು ಸಾಧ್ಯವಾಗಲಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಆದರೆ 10,228 ಎಕರೆಯಲ್ಲಿ ಕಾರುರಾಗಿ ಮತ್ತು 38,807 ಎಕರೆಯಲ್ಲಿ ಬತ್ತ ಬೆಳೆಯಬೇಕೆಂದು ಕಾರ್ಯಕ್ರಮವಿರುವುದಾಗಿ ಉತ್ತರದಲ್ಲಿ ಹೇಳಿದೆಯಲ್ಲಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬತ್ತ ಬೆಳೆಯುವುದಕ್ಕೆ ಕಾರ್ಯಕ್ರಮವಿದೆ, ಆದರೆ ಕಾರು ರಾಗಿ ಬೆಳೆಯುವುದನ್ನು ಈ ವರ್ಷ ನೀರು ಸಾಲದೆ ಬಿಟ್ಟಿದೆ.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಯಾವ ಕಾಲದಲ್ಲಿ ಕಾರುರಾಗಿಯನ್ನು ಬೆಳೆಯುತ್ತಾರೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಸಾಮಾನ್ಯವಾಗಿ ಫೆಬ್ರುವರಿಯಲ್ಲಿ.

ಶ್ರೀ ಎ. ಜಿ. ಬಂದೀಗೌಡರು (ಮಂಡ್ಯಜಿಲ್ಲೆ).—ವಿಶ್ವೇಶ್ವರಯ್ಯ ನಾಲಾ ಪ್ರದೇಶದಲ್ಲಿ ಕಾರುರಾಗಿ ಬೆಳೆಯಬೇಕೆಂದು ಸಂಬಂಧಪಟ್ಟ ಸಮಿತಿಯಲ್ಲಿ ತೀರ್ಮಾನವಾಗಿದ್ದುದು ನಿಜವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹ್ ದು.

ಶ್ರೀ ಎ. ಜಿ. ಬಂದೀಗೌಡರು.—ಆ ಸಮಿತಿಯ ತೀರ್ಮಾನವನ್ನು ತಳ್ಳಿಹಾಕಿ ಕಾರುರಾಗಿಯನ್ನು ಬೆಳೆಯಕೂಡದೆಂದು ತಿಳಿಸಲಾಗಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ನೀರಿನ ಮಟ್ಟವು ಕಡಿಮೆಯಾದ್ದರಿಂದ ಕಾರುರಾಗಿ ಬೆಳೆಯಲು ಸಾಧ್ಯವಿಲ್ಲವೆಂದು ಅದನ್ನು ನಿಲ್ಲಿಸಬೇಕಾಯಿತು ಎಂದು ವಿಷಾದದಿಂದ ಹೇಳಬೇಕಾಗಿದೆ.

ಶ್ರೀ ಎ. ಜಿ. ಬಂದೀಗೌಡರು.—ಐದು ಸಾವಿರ ಎಕರೆಯಲ್ಲಿ ಬೆಳೆ ನಾಡಿ ಎಂದು ಹೇಳಿದಾಗ ಕೂಲಂಕಷವಾಗಿ ವಿಚಾರಮಾಡಿರಲಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹತ್ತು ಸಾವಿರ ಎಕರೆಗಳಲ್ಲಿ ಬೆಳೆಯಬೇಕೆಂದಿತ್ತು. ಆದರೆ ಇತ್ತೀಚೆಗೆ ನೀರಿನ ಮಟ್ಟವು ಬಹಳ ತಿಂಗಳಿನಲ್ಲಿ ಕಡಿಮೆ